
## ಕಾಳಿ ರಕ್ಷಿತಾರಣ್ಯದ ಒಗ್ಗಟ್ಟಿನ ಕಥೆ

ಕಾಳಿ ಹುಲಿ ರಕ್ಷಿತಾರಣ್ಯದಲ್ಲಿ ಸುಮಾರು 100 ಎಕರೆಯಷ್ಟು ಕಾಡನ್ನು ಬೆಂಕಿಯ ಕೆನ್ನಾಲಿಗೆಗಳು ಈ ವರ್ಷ ನುಂಗಿಹಾಕಿವೆ. ಕಳೆದ ಮೂರು ವರ್ಷಗಳಲ್ಲಿ ಬೆಂಕಿಯ ಅಪಾಯದಿಂದ ಪಾರಾಗಿದ್ದ ಈ ಅರಣ್ಯ ಪ್ರದೇಶವು ಕೊಂಚ ದಟ್ಟವಾಗಿಯೆ ಚಿಗುರಿಕೊಂಡಿತ್ತು. ಆದರೆ ಈ ಬಾರಿ ಮಳೆಯು ಬೇಗನೇ ತನ್ನ ಅವಧಿಯನ್ನು ಮುಕ್ತಾಯ ಮಾಡಿಕೊಂಡಿದ್ದರಿಂದ ಕಾಡು ಒಣಗುತ್ತ, ಉರಿಯಲು ಸಜ್ಜಾಗಿ ನಿಂತುಬಿಟ್ಟಿತ್ತು. ಸಾಮಾನ್ಯವಾಗಿ ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಅರಣ್ಯ ಇಲಾಖೆಯು ರಸ್ತೆಯ ಅಂಚನ್ನು ಮತ್ತು ಕಾಡನ್ನು ಬೇರ್ಪಡಿಸಲು ಬೆಂಕಿಯ ರೇಖೆಯನ್ನು ನಿರ್ಮಿಸುತ್ತದೆ. ದಟ್ಟ ಕಾಡಿನ ಪ್ರದೇಶ ಹೆಚ್ಚಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಡಿನೊಳಗೆ ವಾಸಿಸುವ ಸಮುದಾಯವು ಹೆಚ್ಚಾಗಿದೆ. ಅರಣ್ಯ ಇಲಾಖೆಯು ಸುಮಾರು 600ರಷ್ಟು 'ಗ್ರಾಮ ಅರಣ್ಯ ಸಮಿತಿ'ಗಳನ್ನು ರಚಿಸಿದ್ದು, ಈ ಪೈಕಿ ಸುಮಾರು 60ಕ್ಕೂ ಹೆಚ್ಚು ಸಮಿತಿಗಳು ಕಾಳಿ ರಕ್ಷಿತಾರಣ್ಯ ವ್ಯಾಪ್ತಿಯಲ್ಲಿವೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿಯೇ ಈ ಸಮುದಾಯಗಳು ವಾಸಿಸುವ ಕೇರಿಗೆ ತೆರಳಿ ಇಲಾಖೆ ಅಧಿಕಾರಿಗಳು ಈ ಸಮಿತಿಯ ಸಭೆ ಕರೆದು, ಬೆಂಕಿಯಿಂದ ಕಾಡನ್ನು ರಕ್ಷಿಸಲು ಎಲ್ಲರೂ ಒಟ್ಟಾಗಿ ಬದ್ಧರಾಗಿ ನಿಲ್ಲಬೇಕು ಎಂದು ಜಾಗೃತಿ ಮೂಡಿಸಿದ್ದರು. ಈ ಹೊಂದಾಣಿಕೆಯೇ ಕಾಡಿನ ನಿಜವಾದ ಆಧಾರಸ್ತಂಭ. ಆದರೆ ಎಲ್ಲರ ಕೈ ಮೀರಿ ಈ ಬಾರಿ ಕುಳಗಿಯ ಕಾಡಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ಹೈಟೆನ್ಷನ್ ಲೈನ್ ಎಂಬುದು ನೆಪವಾಗಿತ್ತು.

'ಕುಂಬಾರವಾಡ, ಉಳವಿ, ಕ್ಯಾಸಲ್‌ರಾಕ್ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಆದರೆ ಬೆಂಕಿಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದೆವು ಎನ್ನುವುದೇ ಸಮಾಧಾನ' ಎನ್ನುತ್ತಾರೆ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ.



ನಿಯಂತ್ರಿಸಲು ಅಲ್ಲಿ ಬಹಳ ಸಹಾಯ ಮಾಡಿದರು. 'ಕಳೆದ ಏಳೆಂಟು ವರ್ಷಗಳಿಂದ ಕಾಳ್ಗಿಚ್ಚು ಕಾಣಿಸಿಕೊಂಡಿರಲಿಲ್ಲ. ಹಾಗಾಗಿ ಉತ್ಕೃಷ್ಟವಾಗಿ ಹಸುರು ಸಂಪತ್ತು ಬೆಳೆದಿತ್ತು. ಅದರ ಪರಿಣಾಮವೆಂಬಂತೆ ಸಾಕಷ್ಟು ಮಳೆಯಾಗಿ ಅಂಕೋಲಾದಿಂದ ಇಡಗುಂದಿ, ಯಲ್ಲಾಪುರ ಪಟ್ಟಣದವರೆಗೆ ನೀರಿನ ಒರತೆ ಸಮೃದ್ಧವಾಗಿತ್ತು. ಕುಡಿಯುವ ನೀರಿಗೆ ಸಮಸ್ಯೆಯೇ ಇರಲಿಲ್ಲ. ಆದರೇನು, ಬೆಂಕಿಯ ದೆಸೆಯಿಂದ ಒಂದೇ ವಾರದಲ್ಲಿ ಹಸುರು ಸಂಪತ್ತು ನಾಶವಾಯಿತು. ಅರೆಬೈಲ್ ಘಟ್ಟ ವ್ಯಾಪ್ತಿಯಲ್ಲಿ ಸಿಗುವ ಪ್ರಸಿದ್ಧ ಮಿಸ್ರಿ ಜೇನು ದಿಕ್ಕಾಪಾಲಾಗಿ ಹೋಯಿತು. ಮಣ್ಣಿನ ಫಲವತ್ತತೆಯನ್ನು ಕಾಪಿಡುವ ಸರೀಸೃಪಗಳು, ಹಾವುಗಳು ಸೇರಿದಂತೆ ಅನೇಕ ಜೀವಿಗಳು ನಾಶವಾದವು' ಎಂದು ಹಿಮವತಿ ಬೇಸರ ವ್ಯಕ್ತಪಡಿಸುತ್ತಾರೆ.

### ಮಳೆಯ ನಂತರ ಮಳೆಹನಿ ಬೆಂಕಿಯ ನಂತರ ಸುಡುಬಿಸಿ

ಬೆಂಕಿಯನ್ನು ನಿಯಂತ್ರಿಸುವುದೆಂದರೆ ಅದು ಮುಂದುವರೆಯದಂತೆ ತಡೆಯುವುದಷ್ಟೆ. ಅದಾಗಲೇ ಬೆಂಕಿ ಹತ್ತಿಕೊಂಡ ಮರಗಳು ದಿನಗಟ್ಟಲೆ ಉರಿಯುತ್ತಲೇ ಇರುತ್ತವೆ. ಅವು ಅಪಾಯಕಾರಿ. ಉರಿಯುವ ಮರದ ಬುಡಕ್ಕೆ ಹೋಗಿ ಅದನ್ನು ಕಡಿಯುವುದು ಸಾಧ್ಯವಿಲ್ಲ. ಆ ಮರವು ಯಾವ ದಿಕ್ಕಿಗೆ ವಾಲಿ ಮಗುಚಿ ಬೀಳುವುದೋ ಎಂದು ಊರಿನವರು ಕಾಯುತ್ತಾ ಕುಳಿದುಕೊಳ್ಳುತ್ತಾರೆ. ಸುಡುವ ಮರವು ಪಕ್ಕಕ್ಕೆ ವಾಲಿ ಬೆಂಕಿ ಮತ್ತಷ್ಟು ವ್ಯಾಪಿಸಲು ಕಾರಣವಾಗಬಹುದು. ಜನವಸತಿ ಇರುವ ಕಡೆಗೆ ಮಗುಚಿ ಬೀಳಬಹುದು. ವಿದ್ಯುತ್ ತಂತಿಯ ಮೇಲೆ ಬಿದ್ದು ಅನಾಹುತವಾಗಬಹುದು. ಹೀಗಾಗಿ ಹೊತ್ತಿ ಉರಿಯುವ ಮರಗಳನ್ನು ಕಾಯುವುದೊಂದು ದೊಡ್ಡ ಸವಾಲೇ ಸರಿ. ಅರಣ್ಯ ಸಿಬ್ಬಂದಿ ಮತ್ತು ಸ್ಥಳೀಯರು ಯಾವ ಮರದ ಬಳಿಗೆ ತೆರಳುವುದು ಸಾಧ್ಯವೋ, ಅವುಗಳ ಬಳಿಗೆ ತೆರಳಿ ಮರಕ್ಕೆ ಹಗ್ಗ ಬಿಗಿದು ಅದನ್ನು ಬೀಳಿಸಿ, ಭಯ ನಿವಾರಿಸುವುದು ಅನಿವಾರ್ಯ.

ಹೀಗೆ, ಬಾಳೂರು ಅರಣ್ಯದಲ್ಲಿ ಬೆಂಕಿಯು ಹತೋಟಿಗೆ ಬಂತೆಂದು, 'ಉಶ್ಯಪ್ಪ' ಎಂದು ಎಲ್ಲರೂ ಒಂದಿಷ್ಟು ಉಸಿರೆಳೆದುಕೊಂಡಾಗ ಪಕ್ಕದ ಶಿವಾಜಿ ಬೆಟ್ಟದಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡಿತ್ತು. ಇದು ಹೇಗೆ ಸಾಧ್ಯ ಎಂದು ಅಚ್ಚರಿಗೊಳ್ಳುತ್ತಲೇ ಎಲ್ಲರೂ



ಕಾವೇರಿ ವನ್ಯಧಾಮದಲ್ಲಿ ಕಾಳ್ಗಿಚ್ಚು ತಡೆಗೆ 'ಬೆಂಕಿರೇಖೆ' ನಿರ್ಮಾಣದಲ್ಲಿ ತೊಡಗಿರುವ ಸಿಬ್ಬಂದಿ